# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್–6501/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 30/03/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಶಶಿಕಾಂತ್ ಹೆಗ್ಗಡೆ, ಶಿರ್ವ ಗ್ರಾಮ, ಉಡುಪಿ ತಾಲ್ಲೂಕು ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*–*–*

ಪ್ರಕರಣದ ದೂರುದಾರರಾದ ಶ್ರೀ ಶಶಿಕಾಂತ್ ಹೆಗ್ಗಡೆಯವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಉಡುಪಿ ತಾಲ್ಲೂಕಿನ ಶಿರ್ವ ಗ್ರಾಮದ ಸರ್ವೇ ನಂ.256/1ಎ28 ರಲ್ಲಿ 0.05 ಸೆಂಟ್ಸ್ ರಸ್ತೆ ಬದಿಯ ಸರ್ಕಾರಿ ಜಾಗದಲ್ಲಿ ಶ್ರೀ ಕೆ.ಸುಂದರ ಪ್ರಭು ಇವರು ಕಟ್ಟಿರುವ ಕಟ್ಟಡಕ್ಕೆ ಶಿರ್ವ ಗ್ರಾಮ ಪಂಚಾಯತಿಯ ಪಿಡಿಒ ರವರು ಕಟ್ಟಡ ಕಟ್ಟುವ ಪರವಾನಗೆಯನ್ನು ಕಾನೂನುಬಾಹಿರವಾಗಿ ನೀಡಿರುತ್ತಾರೆ. ದಿ:11/07/2013 ರಂದು ಉಡುಪಿ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಇವರು ಸದರಿ ಕಟ್ಟಡವು ರಸ್ತೆಯ ಮಧ್ಯದ ಬಿಂದುವಿನಿಂದ ನಿಗಧಿತ ಅಂತರದಲ್ಲಿ ಕಟ್ಟದೇ ಇರುವುದರಿಂದ, ಕಾಮಗಾರಿಯನ್ನು ನಿಲ್ಲಿಸಲು ತಿಳಿಸಿ ಲಿಖಿತವಾಗಿ ಪತ್ರವನ್ನು ಶಿರ್ವ ಪಂಚಾಯತಿಗೆ ಬರೆದಿರುತ್ತಾರೆ. ಅದರಂತೆ, ದಿ:29/07/2013 ರಂದು ಪಂಚಾಯತಿ ವತಿಯಿಂದ ಸದರಿ ಶ್ರೀ ಸುಂದರ ಪ್ರಭು ರವರಿಗೆ ಕೂಡಲೇ ಕಾಮಗಾರಿಯನ್ನು ನಿಲ್ಲಿಸುವಂತೆ ನೋಟೀಸ್ ನೀಡಲಾಗಿರುತ್ತದೆ. ಉಡುಪಿ ತಹಶೀಲ್ದಾರ್‌ರವರು ಕಾಪುವಿನ ರಾಜಸ್ವ ನಿರೀಕ್ಷಕರ ಮೂಲಕ ಕಟ್ಟಡವು ರಸ್ತೆಯಿಂದ ಕೇವಲ 6.00 ಮೀ., ದೂರದಲ್ಲಿರುತ್ತದೆ ಎಂದು ವರದಿ ನೀಡಿರುತ್ತಾರೆ. ಶಿರ್ವ ಪಂಚಾಯತಿ ವತಿಯಿಂದ ಕಟ್ಟಡ ಪರವಾನಗೆಯನ್ನು ನೀಡಿದಾಗ, ರಸ್ತೆ ಬದಿಯಿಂದ 25.00 ಮೀ., ಅಂತರದಲ್ಲಿ ಕಟ್ಟಡ ರಚಿಸಲು ಅನುಮತಿ ನೀಡಿರುತ್ತಾರೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯವರಿಗೆ ದೂರು ನೀಡಿದಾಗ ಹಳೆ ಮನೆಯ ರಿಪೇರಿ ಎಂದು ಉತ್ತರ ನೀಡಿರುತ್ತಾರೆ. ಇದರಿಂದ, ಎದುರುದಾರರಾದ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಅನಧೀಕೃತ ಕಟ್ಟಡ ಕಟ್ಟುವುದಕ್ಕೆ ಶ್ರೀ ಕೆ.ಸುಂದರ ಪ್ರಭು ಇವರೊಂದಿಗೆ ಶಾಮೀಲಾಗಿದ್ದು, ತಮ್ಮ ಕರ್ತವ್ಯವನ್ನು ಪಾಲಿಸದೇ ಕಾನೂನನ್ನು ಉಲ್ಲಂಘಿಸಿರುತ್ತಾರೆ. ರಸ್ತೆ ಬದಿಯಿಂದ ಟೆಂಪೊಗಳನ್ನು ನಿಲ್ಲಿಸಿ ಪಂಚಾಯತಿ ವತಿಯಿಂದ

ಉಧ್ಯಮ ಲೈಸೆನ್ಸ್ ಪಡೆದು ಕಾನೂನಿನ ಉಲ್ಲಂಘನೆ ಮಾಡಿರುತ್ತಾರೆ. ಈ ಬಗ್ಗೆ ಶಿರ್ವದ ಪಂಚಾಯತಿ ಅಭಿವೃದ್ದಿ ಅಧಿಕಾರಿಯವರಿಗೆ ಕ್ರಮ ಜರುಗಿಸಲು ಲಿಖಿತವಾಗಿ ದೂರು ಸಲ್ಲಿಸಿದ್ದರೂ ಸಹ, ಎದುರುದಾರರು ಆಮೀಶಕ್ಕೆ ಒಳಗಾಗಿ ಅವ್ಯವಹಾರಕ್ಕೆ ಅವಕಾಶ ಮಾಡಿಕೊಟ್ಟಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ಅನಧೀಕೃತವಾಗಿ ಕಟ್ಟಡವನ್ನು ನಿರ್ಮಾಣ ಮಾಡುತ್ತಿರುವುದು ಕಂಡು ಬಂದಲ್ಲಿ ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಂಡು, ಒಂದು ತಿಂಗಳ ಒಳಗಾಗಿ ವರದಿಯನ್ನು ಸಲ್ಲಿಸುವುದಾಗಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಶಿರ್ವ ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು ಇವರು ನಿವೇದಿಸಿಕೊಂಡಿದ್ದು, ಅದರಂತೆ, ಕಾಲಾವಕಾಶ ನೀಡಲಾಗಿತ್ತು. ಕಾಲಾವಕಾಶ ನೀಡಿದಾಗ್ಯೂ ಸಹ ವರದಿಯನ್ನು ಸಲ್ಲಿಸದೇ ಇದ್ದ ಕಾರಣ, ಎದುರುದಾರರಿಗೆ ಕಾರಣ ಕೇಳುವ ನೋಟೀಸನ್ನು ನೀಡಲಾಗಿತ್ತು. ನಂತರ ಎದುರುದಾರರು ತಮ್ಮ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ಉಡುಪಿ ತಾಲ್ಲೂಕಿನ ಶಿರ್ವ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ಸರ್ವೇ ನಂಬರ್ 256/1ಎ28ರ ಸ್ಥಳವು ಜನತಾ ಹೌಸ್ ಸೈಟ್ ಕಾಲೋನಿಯಾಗಿದ್ದು, ಸದರಿ ಸರ್ವೇ ನಂಬರ್‌ನಲ್ಲಿ 0.05 ಸೆಂಟ್ಸ್ ಸ್ಥಳವು ಶ್ರೀಮತಿ ಯಮುನಾಬಾಯಿ ಇವರ ಹೆಸರಿಗೆ 1976ರಲ್ಲಿ ನೀಡಲಾದ ಹೌಸ್ ಸೈಟ್ ಆಗಿರುತ್ತದೆ. ಅದರಂತೆ, ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆಯವರ ಅನುಮತಿ (ನಿರಾಕ್ಷೇಪಣಾ ಪತ್ರ) ಪಡೆದು 1977 ರಲ್ಲಿ ಪಂಚಾಯತಿ ವತಿಯಿಂದ ಪರವಾನಗೆ ಪಡೆದು ಹೆಂಚಿನ ಛಾವಣಿವುಳ್ಳ ಮನೆಯನ್ನು ಕಟ್ಟಲಾಗಿರುತ್ತದೆ. ಸದರಿ ಮನೆಗೆ 16–72 ಮನೆ ನಂಬರ್ ಅನ್ನು ನೀಡಲಾಗಿದ್ದು, ಪ್ರತಿ ವರ್ಷ ಮನೆ ತೆರಿಗೆ ಪಾವತಿಸಲಾಗಿರುತ್ತದೆ. ಸದರಿ ಮನೆ ಸ್ಥಳವನ್ನು ಶ್ರೀಮತಿ ಯಮುನಾಬಾಯಿ ಇವರಿಂದ ಅವರ ಮಗ ಶ್ರೀ ಕೆ. ಸುಂದರ ಪ್ರಭು ಅವರ ಹೆಸರಿಗೆ ಧರ್ಮಸಾಧನೆಗಾಗಿ ಬದಲಾವಣೆಯಾಗಿದ್ದು, ಅಂದಿನಿಂದ ಶ್ರೀ ಕೆ. ಸುಂದರ ಪ್ರಭು ಮತ್ತು ಕುಟುಂಬದವರು ಅಲ್ಲಿ ವಾಸವಾಗಿರುತ್ತಾರೆ.

3. ಶ್ರೀ ಶಶಿಕಾಂತ್ ಹೆಗ್ಗಡೆ ಇವರು ಕೆ.ಸುಂದರ ಪ್ರಭು ರವರ ಮನೆಯ ಸ್ಥಳದಲ್ಲಿ ಆಕ್ರಮಣವಾಗಿದೆ ಎಂದು ದೂರು ಸಲ್ಲಿಸಿದ್ದು, ಸದರಿ ದೂರು ಅರ್ಜಿ ಮೇರೆಗೆ ಗ್ರಾಮ ಪಂಚಾಯತಿ ಅಧ್ಯಕ್ಷರು, ಸದಸ್ಯರು ಹಾಗೂ ಅಧಿಕಾರಿಗಳ ಸ್ಥಳ ತನಿಖೆ ಮಾಡಲಾಗಿದ್ದು, ಈ ಹಿಂದೆ 1977 ರಲ್ಲಿ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆಯವರು ಹಾಗೂ ಗ್ರಾಮ ಪಂಚಾಯತಿಯಿಂದ ಸ್ಥಳ ಪರಿಶೀಲನೆ ನಡೆಸಿ ಅವರ ಆದೇಶದಂತೆ ಹಾಗೂ ಪಂಚಾಯತಿ ವತಿಯಿಂದ ಪರವಾನಗೆ ಪಡೆದು ಹೆಂಚಿನ ಮನೆಯನ್ನು ರಚಿಸಲಾಗಿತ್ತು. ಇದು ಸರ್ಕಾರದಿಂದ ಮಂಜೂರಾದ ನಿವೇಶನವಾಗಿರುತ್ತದೆ. ಇದರಿಂದ, ಸರ್ಕಾರಿ ಸ್ಥಳ ಆಕ್ರಮಣವಾಗಿರುವುದು ಕಂಡು ಬರುವುದಿಲ್ಲ. ಶ್ರೀ ಸುಂದರ ಪ್ರಭು ರವರು ವಾಸವಾಗಿರುವ ಮನೆ

ನಂಬರ್ 16–72ರ ಹೆಂಚು ಮನೆ ತುಂಬ ಹಳೆಯದ್ದಾಗಿದ್ದು, ಪಂಚಾಯತಿ ಪರವಾನಗೆ ಪಡೆದು, ಸದರಿ ಮನೆಯನ್ನು ರಿಪೇರಿ ಮಾಡಿ ಕಟ್ಟಿರುತ್ತಾರೆ. ಸದರಿ ಮನೆಯನ್ನು ರಿಪೇರಿ ಮಾಡಿ ಪುನರಚಿಸಿರುತ್ತಾರೆ. ಈ ಬಗ್ಗೆ ಗ್ರಾಮ ಪಂಚಾಯತಿಯಿಂದ ಸ್ಥಳ ತನಿಖೆ ಮಾಡಿ ನಿರ್ಣಯವನ್ನು ಕೈಗೊಳ್ಳಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

4. ಸದರಿ ವರದಿಯ ಆಧಾರದ ಮೇಲೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಅದರಲ್ಲಿ ಶ್ರೀ ಸುಂದರ ಪ್ರಭುರವರು ಸರ್ಕಾರದ ಪಂಚಾಯತಿ ಕಾರ್ಯದರ್ಶಿಯಾಗಿ ಹಾಗೂ ಪಿಡಿಓ ಆಗಿ ನಿವೃತ್ತಿಯಾಗಿರುತ್ತಾರೆ. ಇವರಿಗೆ ಆದಾಯವಿದ್ದರೂ ಸಹ ಕಾನೂನಿನ ವಿರುದ್ಧವಾಗಿ ತನ್ನ ತಾಯಿಗೆ ಆದಾಯವಿಲ್ಲವೆಂದು ಹೌಸ್ ಸೈಟ್ ಪಡೆದು ತಾಯಿಯಿಂದ ಧರ್ಮ ಕ್ರಯ ಸಾಧನ ಮಾಡಿ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿ ಕೊಂಡಿರುತ್ತಾರೆ. ಹೀಗೆ ಸದರಿ ಶ್ರೀ ಕೆ.ಸುಂದರ ಪ್ರಭು (ಎದುರುದಾರರು) ತಮ್ಮ ಹುದ್ದೆಯನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಇವರು ಕಟ್ಟಡ ನಕ್ಷೆಯನ್ನು ಪರವಾನಗೆ ಕೋರಿ ಅರ್ಜಿ ಸಲ್ಲಿಸಿದ್ದಾಗ ನೀಡಿದ್ದು, ಅದು ಸುಳ್ಳು ನಕ್ಷೆಯಾಗಿರುತ್ತದೆ. ಇದಲ್ಲದೇ, ರಸ್ತೆಯ ಮಧ್ಯಭಾಗದಿಂದ 6.00 ಮೀ., ಅಂತರದಲ್ಲಿ ಕಟ್ಟಡ ಕಾಮಗಾರಿ ಮಾಡುತ್ತಿರುವುದಾಗಿ ಗ್ರಾಮ ಪಂಚಾಯತಿಯ ಪಿಡಿಓ ರವರಿಗೆ ಮಾಹಿತಿ ದೊರೆತ ಮೇಲೆ ದಿ:29/11/2013 ರಂದು ಕಟ್ಟಡ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕೆಂದು ತಿಳಿಸಿ ಪತ್ರ ಬರೆದಿದ್ದು, ಈ ಮಧ್ಯೆ ಉಡುಪಿ ತಹಶೀಲ್ದಾರ್ ರವರು ದಿ:29/11/2013 ರಂದು ರಸ್ತೆ ಮಧ್ಯಭಾಗದಿಂದ 6.00 ಮೀ., ಅಂತರದಲ್ಲಿ ಕಟ್ಟಡ ಕಾಮಗಾರಿ ಮಾಡುತ್ತಿರುವುದಾಗಿ ಶಿರ್ವ ಗ್ರಾಮ ಪಂಚಾಯತಿ ಪಿಡಿಓ ರವರಿಗೆ ತಿಳಿಸಿ, ಪಿಡಿಓ ರವರಿಗೆ ಕಟ್ಟದ ನಿರ್ಮಾಣವನ್ನು ನಿಲ್ಲಿಸಲು ಆದೇಶ ನೀಡಿರುತ್ತಾರೆ. ಅದರಂತೆ, ಅಂದಿನ ಪಿಡಿಓ (ಶ್ರೀಮತಿ ಮಾಲತಿ) ರವರು ಕಟ್ಟಡದ ಕಾಮಗಾರಿಯನ್ನು ನಿಲ್ಲಿಸಲು ತಿಳಿಸಿ ನೋಟೀಸ್ ನೀಡಿರುತ್ತಾರೆ. ಸದರಿ ನೋಟೀಸನ್ನು ಎದುರುದಾರರ ಮೇಲೆ ಜಾರಿ ಮಾಡಲಾಗಿರುತ್ತದೆ. ಇದಲ್ಲದೇ, ಹಿಂದಿನ ಲೋಕೋಪಯೋಗಿ ಇಲಾಖೆಯಿಂದ ಪಡೆದ ನಿರಾಕ್ಷೇಪಣಾ ಪತ್ರವನ್ನು ತೋರಿಸಿ ಎದುರುದಾರರು ರಸ್ತೆ ಮಧ್ಯದಿಂದ 6.00 ಮೀ., ಅಂತರದಲ್ಲಿ ಒಂದು ಮಹಡಿ ಹಾಗೂ ಅಂಗಡಿಯನ್ನು ಕಟ್ಟಿರುತ್ತಾರೆಂದು ಈ ಬಗ್ಗೆ ಸಂಬಂಧಿಸಿದ ಗ್ರಾಮ ಅಭಿವೃದ್ಧಿ ಅಧಿಕಾರಿಯಾಗಲೀ ಅಥವಾ ತನಿಖಾಧಿಕಾರಿಯಾಗಲೀ ಯಾವುದೆ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ಅವರ ವಿರುದ್ದ ಕ್ರಮ ಕೈಗೊಳ್ಳಬೇಕೆಂದು ತಿಳಿಸಿರುತ್ತಾರೆ.

5. ದೂರಿನಂಶಗಳನ್ನು, ಎದುರುದಾರರು ಹಾಜರುಪಡಿಸಿರುವ ಆಕ್ಷೇಪಣೆ/ವರದಿ ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಶಿರ್ವ ಗ್ರಾಮದ ಸರ್ವೇ ನಂಬರ್ 256/1ಎ28ರ ಜಮೀನು ರಸ್ತೆಯ ಬದಿಯಲ್ಲಿದ್ದು, ಶ್ರೀ ಸುಂದರ ಪ್ರಭು ಇವರ ತಾಯಿ ಯಮುನಾಬಾಯಿರವರಿಗೆ 0.05 ಸೆಂಟ್ಸ ಜಾಗವನ್ನು ನಿವೇಶನವೆಂದು 1976 ರಲ್ಲಿ ನೀಡಿರುತ್ತಾರೆಂದು ಆಗ

ಶ್ರೀ ಕೆ. ಸುಂದರ ಪ್ರಭುರವರ ಹೆಸರಿಗೆ ಖಾತೆ ಬದಲಾವಣೆ ಮಾಡಲಾಗಿರುತ್ತದೆ ಎಂದು ದಾಖಲಾತಿಗಳಿಂದ ಕಂಡು ಬರುತ್ತದೆ. ತದನಂತರ ಶ್ರೀ ಸುಂದರ ಪ್ರಭುರವರು ಅರ್ಜಿಯನ್ನು ಸಲ್ಲಿಸಿ, ಹಳೇ ಕಟ್ಟಡದ ಜಾಗದಲ್ಲಿ ಹೊಸ ಕಟ್ಟಡ ನಿರ್ಮಿಸಲು ಪರವಾನಗೆಯನ್ನು ಕೋರಿದ್ದು, ಇದಕ್ಕೆ ಕಟ್ಟಡ ಕಟ್ಟುವ ಪರ್ಮಿಟ್ ಅನ್ನು ನೀಡಿರುವುದು ಕಂಡು ಬಂದಿರುತ್ತದೆ. ಏತನ್ಮಧ್ಯೆ ಉಡುಪಿ ತಹಶೀಲ್ದಾರ್‌ಇವರು ಕಾರ್ಯನಿರ್ವಾಹಣಾಧಿಕಾರಿ, ತಾಲ್ಲೂಕು ಪಂಚಾಯತಿ, ಉಡುಪಿ ಇವರಿಗೆ ದಿ:29/11/2013 ರಂದು ಪತ್ರ ಬರೆದು ಶ್ರೀ ಸುಂದರ ಪ್ರಭು ಅವರ ತಾಯಿ ಯಮುನಾಬಾಯಿರವರಿಂದ ಅವರಿಗೆ ಧರ್ಮಸಾಧನೆಯಿಂದ ದಾಖಲಾತಿ ಸಂಖ್ಯೆ:1885/1998ರಂತೆ ಸರ್ವೇ ನಂ.256/1ಎ28ರ 0.05 ಎಕರೆ ವಸತಿ ನಿವೇಶನವನ್ನು ಶ್ರೀ ಸುಂದರ ಪ್ರಭು ಇವರ ಹೆಸರಿಗೆ ಖಾತೆ ಬದಲಾವಣೆ ಮಾಡಲಾಗಿರುತ್ತದೆ. ತದನಂತರ, ಶ್ರೀ ಸುಂದರ ಪ್ರಭುರವರು ಕಟ್ಟುತ್ತಿರುವ ಕಟ್ಟಡವು ಅನಧೀಕೃತವಾಗಿದ್ದು, ಕಾಪುವಿನ ರಾಜಸ್ವ ನಿರೀಕ್ಷಕರು ತನಿಖಾ ವರದಿ ನೀಡಿದ್ದು, ಅದರಲ್ಲಿ ಶಿರ್ವ ಗ್ರಾಮದ ಶ್ರೀ ಸುಂದರ ಪ್ರಭುರವರು ಶಿರ್ವ ಗ್ರಾಮದ ಸರ್ವೇ ನಂಬರ್ 256/1ಎ28 ರಲ್ಲಿ ಪಿಡಬ್ಲ್ಯೂಡಿ ರಸ್ತೆ ಮಧ್ಯದಿಂದ 6.00 ಮೀ., ಅಂತರದಲ್ಲಿ ನಿರ್ಮಾಣ ಮಾಡುತ್ತಿರುವುದರಿಂದ ಶಿರ್ವ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಗೆ ಈ ಬಗ್ಗೆ ಸೂಕ್ತ ನಿರ್ದೇಶನ ನೀಡಲು ತಿಳಿಸಿರುತ್ತಾರೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ).

6. ಇದಲ್ಲದೇ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ಇವರು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಉಡುಪಿ ಇವರಿಗೆ ಪತ್ರ ಬರೆದು, ದೂರುದಾರರು ಸಲ್ಲಿಸಿರುವ ಅರ್ಜಿಯ ಮೇರೆಗೆ ಸೂಕ್ತ ಕ್ರಮಕೈಗೊಂಡು ವರದಿ ಸಲ್ಲಿಸಲು ತಿಳಿಸಿರುತ್ತಾರೆ. ಆದಾಗ್ಯೂ ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಹಾಗೂ ಯಾವುದೆ ದಾಖಲೆಯನ್ನು ಹಾಜರುಪಡಿಸದೇ ಇರುವ ಕಾರಣ, ಪ್ರಕರಣದ ದೂರು ಅಂಶದ ಬಗ್ಗೆ ಕೂಲಂಕುಷ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಶಿರ್ವ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯವರು ಜಿಲ್ಲಾ ಪಂಚಾಯತಿ ಕಾರ್ಯಲಯದಿಂದ ಬಂದ ಪತ್ರದ ಮೇರೆಗೆ ಹಾಗೂ ತಹಶೀಲ್ದಾರ್‌ರವರಿಂದ ಬಂದ ಪತ್ರದ ಮೇರೆಗೆ ದಿ:29/07/2013ರಂದು ನೋಟೀಸ್ ನೀಡಿ ಶ್ರೀ ಸುಂದರ ಪ್ರಭು ರವರು ತಮ್ಮ ಕಟ್ಟಡವನ್ನು ಲೋಕೋಪಯೋಗಿ ರಸ್ತೆಯ ಪರಿಮಿತಿಯೊಳಗೆ ಕಟ್ಟಿರುವ ಬಗ್ಗೆ ಸೂಕ್ತ ಕ್ರಮ ಜರುಗಿಸುವಂತೆ ತಿಳಿಸಿದ್ದು, ಅದರಂತೆ, ನೋಟೀಸ್ ತಲುಪಿದ ತಕ್ಷಣ ಕಟ್ಟಡದ ಕಾಮಗಾರಿಯನ್ನು ಸ್ಥಗಿತಗೊಳಿಸಿ ಲೋಕೋಪಯೋಗಿ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ಹಾಜರುಪಡಿಸಲು ತಿಳಿಸಿರುತ್ತಾರೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ).

7. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ಶ್ರೀ ಸುಂದರ ಪ್ರಭುರವರು ಶಿರ್ವ ಗ್ರಾಮದ ಸರ್ವೇ ನಂ.256/1ಎ28 ರಲ್ಲಿ ಮನೆಯನ್ನು ಪುನರಚಿಸುವ ಕಾಲದಲ್ಲಿ ರಸ್ತೆಯ ಮಧ್ಯದ ಬಿಂದುವಿಂದ 6.00 ಮೀ., ಬಿಟ್ಟು ಹೊರಗೆ ಕಟ್ಟಡವನ್ನು ಕಟ್ಟಬೇಕಾಗಿದ್ದು, ಹಾಗೆ ಕಟ್ಟದೇ ನಿಯಮವನ್ನು ಉಲ್ಲಂಘಿಸಿರುವುದು ಕಂಡು ಬರುತ್ತದೆ. ಆದಾಗ್ಯೂ ಸಹ, ಸದರಿಯವರು ಕಟ್ಟಡವನ್ನು ಕಟ್ಟಿ ಪೂರ್ಣಗೊಳಿಸಿರುವ ಬಗ್ಗೆ ಪೋಟೋವನ್ನು ಹಾಜರುಪಡಿಸಲಾಗಿದ್ದು, ಆದ್ದರಿಂದ, ಗ್ರಾಮ ಪಂಚಾಯತಿಯ ಪಿಡಿಓ ರವರು ಶ್ರೀ ಸುಂದರ ಪ್ರಭುರವರು ರಸ್ತೆ ಮಧ್ಯದಿಂದ 6.00 ಮೀ., ಒಳಗೆ ಕಟ್ಟಡವನ್ನು ನಿರ್ಮಾಣ ಮಾಡಿ ನಿಯಮವನ್ನು ಉಲ್ಲಂಘಿಸಿರುತ್ತಾರೆ [redacted] ಹಾಗೂ ಈ ಬಗ್ಗೆ ಪಂಚಾಯತಿ ವತಿಯಿಂದ ನೋಟೀಸ್ ನೀಡಲಾಗಿರುತ್ತದೆ. ಇದಲ್ಲದೇ, ಸದರಿ ಸೈಟ್ ಅನ್ನು ಎದುರುದಾರರ ತಾಯಿಯ ಹೆಸರಿನಲ್ಲಿ ಸರ್ಕಾರದಿಂದ ಪಡೆದು ನಂತರ ತಮ್ಮ ಹೆಸರಿಗೆ ಮಾಡಿಕೊಂಡಿರುವುದಾಗಿ ಕಂಡು ಬರುತ್ತದೆ.

**8.** ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ತಾಲ್ಲೂಕಿನ ಶಿರ್ವ ಗ್ರಾಮದ ಸರ್ವೇ ನಂ.256/1ಎ28 ರಲ್ಲಿ ಶ್ರೀ ಸುಂದರ ಪ್ರಭು ರವರು ಕಟ್ಟಿರುವ ಸದರಿ ಅನಧೀಕೃತ ಕಟ್ಟಡವನ್ನು ತೆರವುಗೊಳಿಸಲು ಕಾನೂನಿನಡಿ ಸೂಕ್ತ ಕ್ರಮ ಜರುಗಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು** ಮಾಡಲಾಗಿದೆ. ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.
30/3/17